ವಿಷಯವನ್ನು ನಾನು ಯಾವುದೋ ಒಂದು ಪತ್ರಿಕೆಯಲ್ಲಿ ನೋಡಿದೆ. ಇವರು CET ಯನ್ನು ಇವತ್ತು ಮುಚ್ಚುವುದಕ್ಕೆ ಹೊರಟಿದ್ದಾರೆ.

(ಗೊಂದಲ)

ಶ್ರೀ ರಾಮಚಂದ್ರಗೌಡ : ಇರುವಂಥ ಕಾಲೇಜುಗಳನ್ನು ಉಳಿಸುವುದಕ್ಕೋಸ್ಕರ, ಎಲ್ಲಿ admissions ಆಗುತ್ತಿಲ್ಲ ಅಲ್ಲಿ.....

(ಗೊಂದಲ)

ಅಧ್ಯಕ್ಷರು :– ನಿಮಗೆ ಅವಶ್ಯಕತೆ ಇದ್ದರೆ ಪ್ರಸ್ತಾವನೆ ಕಳುಹಿಸಿ, follows up ಮಾಡಿ.

(ಗೊಂದಲ)

ಶ್ರೀ ಎನ್.ಸಂಪಂಗಿ : ಆ ಜನಗಳ್ಯಾರೂ para medical ಓದಬಾರದೇ ಅಥವಾ ಅವರು ವೈದ್ಯಕೀಯ ಶಿಕ್ಷಣಕ್ಕೆ ಹೋಗಬಾರದೇ?

ಅಧ್ಯಕ್ಷರು : ಎಲ್ಲ ವಿಷಯಗಳನ್ನು ಅವರು ಹೇಳಿದರಲ್ಲ.

ಶ್ರೀ ಎನ್.ಸಂಪಂಗಿ : ಆ ಜಿಲ್ಲೆಗೆ ಎಷ್ಟು ಕೊಟ್ಟಿದ್ದೀರಿ ಎಂದು ನಾನು ಕೆಳುತ್ತಿದ್ದೇನೆ. ಇವರು ರಾಜ್ಯದ್ದು ಹೇಳಿಬಿಟ್ಟು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಏನಾಗಿದೆ, ಅಲ್ಲಿ ಯಾವ ಮಕ್ಕಳು ಓದುತ್ತಿದ್ದಾರೆ, ಎಷ್ಟು ಸಂಖ್ಯೆಯಲ್ಲಿ ಓದುತ್ತಿದ್ದಾರೆ ಏನ್ನುವುದ್ಯಾವುದನ್ನೂ ಹೇಳಿಲ್ಲ.

ಶ್ರೀ ರಾಮಚಂದ್ರಗೌಡ : ನೀವು ಪ್ರಸ್ತಾವನೆಯನ್ನು ಕಳುಹಿಸಿ.

ಅಧ್ಯಕ್ಷರು : ಆಯಿತು, ಈಗ ಮುಂದಿನ ಪ್ರಶ್ನೆ. ಶಿವಶಂಕರರೆಡ್ಡಿಯವರೇ ಪ್ರಶ್ನೆಯನ್ನು ಕೇಳಿ.

ಗೌರಿಬಿದನೂರು ಕ್ಷೇತ್ರ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳ ಸುವ್ಯವಸ್ಥೆ ಬಗ್ಗೆ.

43 (378) ಶ್ರೀ. ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು)

ಶ್ರೀ. ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಗೌರಿಬಿದನೂರು ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು? ಇದರಲ್ಲಿ ಮೇಲ್ದರ್ಜೆಗೇರಿಸಲ್ಪಟ್ಟ ಆಸ್ಪತ್ರೆಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು)?

ಗೌರಿಬಿದನೂರು ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ–	:	19
ಸಾರ್ವಜನಿಕ ಆಸ್ಪತ್ರೆ	;	01
ಪ್ರಾಥಮಿಕ ಆರೋಗ್ಯ ಕೇಂದ್ರಗಳು	:	17
ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕೆಂದ್ರ	:	01

ಇದರಲ್ಲಿ 7 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಸರ್ಕಾರದ ಆದೇಶದ ಸಂಖ್ಯೆ: ಆಕುಕ/481/ಸಿಜಿಎಂ/2007, ದಿನಾಂಕ: 02–06–2007 ರಲ್ಲಿ ಮೇಲ್ದರ್ಜೆಗೇರಿಸಲಾಗಿದೆ. ವಿವರ ಈ ಕೆಳಕಂಡಂತಿದೆ:

1. ದೋರಿನಾಯಕನ ಪಾಳ್ಯ
2. ಹುಡುಬೂರು
3. ಕಲ್ಲಿನಾಯಕನ ಹಳ್ಳಿ
4. ಕುರುಡಿ
5. ನಾಗರಗೆರೆ
6. ರಾಂಪುರ
7. ವಿಧುರಾಶ್ವಥ.

ಆ) ಮೇಲ್ದರ್ಜೆಗೇರಿಸಲ್ಪಟ್ಟ ಆಸ್ಪತ್ರೆಗಳಲ್ಲಿ ರೋಗಿಗಳ ಉತ್ತಮ ಚಿಕಿತ್ಸೆಗೆ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸಮಸ್ಯೆಯನ್ನು ಯಾವಾಗ ನಿವಾರಿಸಲಾಗುವುದು ಹಾಗೂ ಸರ್ಕಾರವು ಕೈಗೊಂಡ ಕ್ರಮವೇನು?

ಸಾರ್ವಜನಿಕ ಆಸ್ಪತ್ರೆ ಗೌರಿಬಿದನೂರಿನಲ್ಲಿ 10 ತಜ್ಞರ ಹುದ್ದೆ ಮಂಜೂರಾಗಿದ್ದು 8 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಸ್ತ್ರೀ ರೋಗ ತಜ್ಞವೈದ್ಯರು ಮತ್ತು ಕಣ್ಣಿನ ತಜ್ಞರ ಎರಡು ಹುದ್ದೆಗಳು ಮಾತ್ರ ಖಾಲಿ ಇರುತ್ತದೆ. ತಾಲ್ಲೂಕಿನಲ್ಲಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ

ಇಲಾಖೆಯಲ್ಲಿ ತಜ್ಞವೈದ್ಯರ ಹುದ್ದೆಗಳು ಕೊರತೆಯಿರುತ್ತದೆ ಈ ಕೊರತೆಯನ್ನು ನೀಗಿಸಲು ತಜ್ಞವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞವೈದ್ಯರುಗಳನ್ನು ಸಂದರ್ಶಕ ತಜ್ಞವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೊತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಇ) ಆಸ್ಪತ್ರೆಯ ಆವರಣದಲ್ಲಿ ಶುಚಿತ್ವ ಇಲ್ಲದೇ ರೋಗಿಗಗಳು ಪರಿತಪಿಸುತ್ತಿರುವುದು ನಿಜವೇ? ಹಾಗಿದ್ದಲ್ಲಿ. ಇದರ ನಿವಾರಣೆಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಸಾರ್ವಜನಿಕ ಆಸ್ಪತ್ರೆ ಗೌರಿಬಿದನೂರಿನಲ್ಲಿ ಶುಚಿತ್ವಕ್ಕಾಗಿ ನಾನ್ ಕ್ಲೀನಿಕಲ್ ಸರ್ವಿಸ್‌ನಡಿ ಆಸ್ಪತ್ರೆಯ ಶುಚಿತ್ವವನ್ನು ನಿರ್ವಹಿಸಲಾಗುತ್ತಿದೆ. ಇತರೆ ಆಸ್ಪತ್ರೆಗಳಲ್ಲಿ ಸಹ ಆರೋಗ್ಯ ರಕ್ಷಾ ಸಮಿತಿ ಅನುಮೋದನೆ ಪಡೆದು ಮುಕ್ತನಿಧಿಯಿಂದ ಶುಚಿತ್ವ ಕಾರ್ಯವನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) 2008–09ನೇ ಸಾಲಿನಲ್ಲಿ ಗೌರಿಬಿದನೂರು ತಾಲ್ಲೂಕಿನಲ್ಲಿ ಹೊಸದಾಗಿ ಆಸ್ಪತ್ರೆಯನ್ನೂ ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಶ್ರೀ. ಎನ್.ಹೆಚ್. ಶಿವಶಮಕರ್‌ರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒದಗಿಸಿರುವ ಉತ್ತರ ಸಮಂಜಸವಾಗಿದೆ. ಆದರೆ ಕೆಲವು ವಿಚಾರಗಳನ್ನು ಸಚಿವರ ಗಮನಕ್ಕೆ ತರಲು ಬಯಸುತ್ತೇನೆ. ನೀವು ಮೇಲ್ದರ್ಜೆಗೇರಿಸಿರುವ ಏಳು ಆಸ್ಪತ್ರೆಗಳ ಕಟ್ಟಡಗಳಿಗೆ ಕಳೆದ ಆರು ತಿಂಗಳ ಹಿಂದೆ ಹಣ ಮಂಜೂರಾಗಿದೆ. ಆದರೆ ಇದುವರೆಗೂ ಕಾಮಗಾರಿಗಳು ಪ್ರಾರಂಭವಾಗಿಲ್ಲ. ಪಟ್ಟಣದಲ್ಲಿರತಕ್ಕಂಥ ಆಸ್ಪತ್ರೆಯಲ್ಲಿ ಸ್ಥಳಾವಕಾಶ ಬಹಳ ಕಡಿಮೆ ಇದೆ. ಅಲ್ಲಿ ಎರಡು ವಾರ್ಡ್‌ಗಳನ್ನು ಹೆಚ್ಚಿಗೆ ನಿರ್ಮಾಣ ಮಾಡುವುದಕ್ಕೆ ಹಣ ಒದಗಿಸಬೇಕು ಎಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಒಂದು Ambulance ಕೂಡ ಪಟ್ಟಣದ ಆಸ್ಪತ್ರೆಗೆ ಬೇಕಾಗಿದೆ. ದಯಮಾಡಿ ಮಾನ್ಯ ಮಂತ್ರಿಗಳು ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ.ಬಿ.ಶ್ರೀರಾಮುಲು: ಗೌರಿಬಿದನೂರು ತಾಲ್ಲೂಕಿನಲ್ಲಿ ಒಟ್ಟು 19 ಆಸ್ಪತ್ರೆಗಳಿದ್ದು, ಅವುಗಳಲ್ಲಿ 1 ಸಾರ್ವಜನಿಕ ಆಸ್ಪತ್ರೆ, 17 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 1 ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕೇಂದ್ರಗಳು ಇರುತ್ತವೆ. ಇದರಲ್ಲಿ 7 ಪ್ರಾಥಮಿಕ ಆರೋಗ್ಯ ಘಟಗಳನ್ನು ಪ್ರಾಥಮಿಕ ಆರೋಗ್ಯ ಕೆಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದೆ. ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ 10 ಮಂದಿ ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, 8 ತಜ್ಞ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿ ಇನ್ನೂ ಎರಡು ವಾರ್ಡ್‌ಗಳು ಬೇಕಾಗಿದೆ ಮತ್ತು ಮೇಲ್ದರ್ಜೆಗೇರಿಸಿರುವ ಕೇಂದ್ರಗಳಿಗೆ ಕಟ್ಟಡಗಳು ಆಗಬೇಕು ಎಂದು ಕೇಳಿದ್ದಾರೆ. ಅದಕೆ ಆದಷ್ಟು ಬೇಗನೆ ನಾವು ಆರ್ಥಿಕ ಇಲಾಖೆಯಿಂದ ಹಣವನ್ನು ಪಡೆದು ಆ ಕಾಮಗಾರಿಗಳನ್ನು ಪ್ರಾರಂಭ ಮಾಡಲು ಪ್ರಯತ್ನವನ್ನು ಮಾಡುತ್ತೇವೆ.

ಉಡುಪಿ ಜಿಲ್ಲೆಯಲ್ಲಿರುವ ಆರೋಗ್ಯ ಕೇಂದ್ರಗಳ ಮಾಹಿತಿ ಬಗ್ಗೆ

44 (269) ಶ್ರೀ. ಗೋಪಾಲ ಭಂಡಾರಿ.ಹೆಚ್ (ಕಾರ್ಕಳ)

ಶ್ರೀ. ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿರುವ ಆರೋಗ್ಯ ಕೇಂದ್ರಗಳು ಯಾವುವು: ಅವುಗಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳಗಳು ಯಾವುವು (ಊರುಗಳ ಹೆಸರನ್ನು ತಿಳಿಸುವುದು)?

ಉಡುಪಿ ಜಿಲ್ಲೆಯಲ್ಲಿ; ಜಿಲ್ಲಾ ಆಸ್ಪತ್ರೆ	–	1
ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆ	–	1
ಸಮುದಾಯ ಆರೋಗ್ಯ ಕೇಂದ್ರಗಳು	–	6